# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್.ಸಿ. 258/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಶಾರದಮ್ಮ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಬಸವೇಗೌಡ | | **21.08.2024** |
| **ವಯಸ್ಸು** | ಃ **68** ವರ್ಷ | | |
| **ವೃತ್ತಿ** | ಃ ಗೃಹಿಣಿ | **ಪ್ರಾ.ಸಾ.** | ಃ **04** |
| **ವಾಸಸ್ಥಳ** | ಃ ಸಿದ್ದಲಿಂಗಪುರ | **ಚಾ.ಸಾ.** | ಃ **02** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೈಸೂರು ತಾಲೂಕಿನ ಸಿದ್ದಲಿಂಗಪುರ ಗ್ರಾಮದಲ್ಲಿ ನನಗೆ ಸೇರಿದ ಕಟ್ಟಡ ಇದ್ದು ಅದರಲ್ಲಿ *5* ಮಳಿಗೆಗಳಿವೆ. ಕೋರ್ಟ್ ಮುಂದೆ ಇರುವ ಆರೋಪಿತನಿಗೆ ಈಗ ಅಂದಾಜು *1* ವರ್ಷ ಕೆಲವು ದಿನದ ಹಿಂದೆ ನನ್ನ ಒಂದು ಮಳಿಗೆಯನ್ನು ಬೇಕರಿ ನಡೆಸಲು ಬಾಡಿಗೆಗೆ ಕೊಟ್ಟಿದ್ದೆ. ಆರೋಪಿತನಿಗೆ ಆ ಮಳಿಗೆ ಬಾಡಿಗೆ ಕೊಡುವ ಮೊದಲು ಅದರಲ್ಲಿ ಒಬ್ಬ ಸುಪ್ರೀತ್ ಎನ್ನುವಾತನು ಬೇಕರಿ ನಡೆಸುತ್ತಿದ್ದ. ಆ ಸುಪ್ರೀತ್ ನೇ ಕೋರ್ಟ್ ಮುಂದೆ ಇರುವ ಆರೋಪಿತನನ್ನು ಕರೆದುಕೊಂಡು ಬಂದು ಆ ಮಳಿಗೆಯನ್ನು ಆತನಿಗೆ ಕೊಡುವಂತೆ ಹೇಳಿ ತಾನು ಖಾಲಿ ಮಾಡಿಕೊಂಡು ಹೋಗಿದ್ದ. ಆ ಬೇಕರಿಯನ್ನು ಆರೋಪಿತನೇ ನಡೆಸುತ್ತಿದ್ದ. ಆ ಮಳಿಗೆ ಬಾಡಿಗೆಗೆ ಪಡೆಯುವ ಕಾಲಕ್ಕೆ ಆರೋಪಿತನ ಜೊತೆ ಒಂದು ಹುಡುಗಿ ಸಹ ಬಂದಿದ್ದರು ಆದರೆ ಆಕೆಯ ಹೆಸರು ಗೊತ್ತಿಲ್ಲ. ಆ ಮಳಿಗೆಗೆ ಕೊಟ್ಟ ಬಳಿಕ ಮೊದಲಿಗೆ ಆರೋಪಿತ ಒಬ್ಬನೇ ಅಲ್ಲಿ ಬೇಕರಿ

ನಡೆಸುತ್ತಿದ್ದ ನಂತರ ಆ ಹುಡುಗಿ ಬಂದಿದ್ದರು. ಆದರೆ ಆರೋಪಿತ ಆ ಕಾಲಕ್ಕೆ ಆ ಹುಡುಗಿ ತನಗೆ ಯಾವ ರೀತಿ ಸಂಬಂದ ಎಂದು ಹೇಳಿರಲಿಲ್ಲ. ಆರೋಪಿತ ತನ್ನ ಹೆಸರಿಗೆ ಬಾಡಿಗೆ ಕರಾರನ್ನು ಮಾಡಿಸಿಕೊಂಡಿದ್ದ. ಆ ಬೇಕರಿ ನಡೆಸುವ ಕಾಲಕ್ಕೆ ಆರೋಪಿತ ಮತ್ತು ಆತನ ಜೊತೆ ಬಂದಿದ್ದ ಹುಡುಗಿ ಎಲ್ಲಿ ವಾಸ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ಬಾಡಿಗೆ ಪತ್ರ ಯಾವ ತಿಂಗಳಿನಲ್ಲಿ ಮಾಡಿಸಿಕೊಂಡಿದ್ದೆ ಎಂದು ನೆನಪಿಲ್ಲ. ಈಗ ನಾನು ನೋಡುತ್ತಿರುವ ದಾಖಲೆ ಆರೋಪಿತನೊಂದಿಗೆ ಮಾಡಿಕೊಂಡಿದ್ದ ಬಾಡಿಗೆ ಕರಾರು ಪತ್ರ ಇದೆ. ಸದರಿ ದಾಖಲೆಯನ್ನು ನಿ.ಪಿ-*6* ಎಂದು ಗುರುತಿಸಿದೆ.

*2.* ಆ ನಂತರ ಒಂದು ನಾನು ನನ್ನ ಸಂಬಂಧಿಗಳ ಮನೆಗೆ ಹೋಗಿದ್ದಾಗ ಆ ಮಳಿಗೆಯಲ್ಲಿ ಒಂದು ಹುಡುಗಿಯ ಕೊಲೆಯಾಗಿತ್ತು. ಆ ದಿನ ಸಂಜೆ ನನಗೆ ಆ ಕೊಲೆಯಾಗಿದ್ದ ಬಗ್ಗೆ ಗೊತ್ತಾಗಿತ್ತು. ಚಾ.ಸಾ-*3* ಕುಮಾರ ನನ್ನ ಅಳಿಯನ ಅಣ್ಣನಿರುತ್ತಾನೆ. ಆ ಕೊಲೆಯಾದ ದಿನ ಚಾ.ಸಾ-*3* ಅಲ್ಲಿಗೆ ಬಂದಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ. ನಮ್ಮ ಮಳಿಗೆಯಲ್ಲಿ ಕೊಲೆಯಾಗಿದ್ದ ಹುಡುಗಿ ಯಾರು ಎಂದು ಈಗಲೂ ಗೊತ್ತಿಲ್ಲ. ಆ ಹುಡುಗಿ ಕೊಲೆಯನ್ನು ಯಾರು ಮತ್ತು ಯಾವ ಕಾರಣಕ್ಕೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ಪೋಲೀಸರು ಮುಂದೆ ನಾನು ಹೇಳಿಕೆ ಕೊಟ್ಟಿಲ್ಲ. ಪೋಲೀಸರು ನನಗೆ ನೋಟಿಸ್ ಕೊಟ್ಟಿರಲಿಲ್ಲ ಆದರೆ ಈಗ ನಾನು ನೋಡುತ್ತಿರುವ ದಾಖಲೆಗೆ ನನ್ನ ಸಹಿಯನ್ನು ಮಾತ್ರ ಪಡೆದಿದ್ದಾರೆ. ಸದರಿ ದಾಖಲೆ ನೋಟಿಸ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿ.ಪಿ-*7* ಮತ್ತು ಸಹಿಯನ್ನು ನಿ.ಪಿ-*7(ಎ)* ಎಂದು ಗುರುತಿಸಿದೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

<u>*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*</u>

*3.* ನನ್ನ ಮಳಿಗೆ ಬಾಡಿಗೆ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಚಾ.ಸಾ-*3* ಕುಮಾರ ನೋಡಿಕೊಳ್ಳುತ್ತೇನೆ. ದಿಃ*30.06.2023* ರಂದು ಪೋಲೀಸರು ನನಗೆ ನಿ.ಪಿ-*7* ರಂತೆ ನೋಟಿಸ್ ಕೊಟ್ಟಿದ್ದರು ಎಂದರೆ ಸಹಿ ಮಾಡಿದ್ದು ನಿಜ ಆದರೆ ಅದರಲ್ಲಿ ಬರೆದ ವಿಷಯ ಗೊತ್ತಿಲ್ಲ. *2022* ರ ಮೇ ತಿಂಗಳಿನಲ್ಲಿ ಸುಪ್ರೀತ್ ಎನ್ನುವಾತನು ನನ್ನ ಎರಡನೇ ಮಳಿಗೆಯನ್ನು ಬಾಡಿಗೆಗೆ ಪಡೆದು ಬೇಕರಿ ನಡೆಸುತ್ತಿದ್ದ ಎಂದರೆ ನಿಜ. ನಂತರ ಸುಪ್ರೀತ್ ನಿಗೆ ಬೇಕರಿ ಸರಿಯಾಗಿ ನಡೆಸಲು ಆಗದೇ ಇದ್ದ ಕಾರಣ ಕೋರ್ಟ್ ಮುಂದೆ ಇರುವ ಆರೋಪಿತ ಮತ್ತು ಮಮತಾ ಎನ್ನುವವರನ್ನು ಕರೆದುಕೊಂಡು ಬಂದು ಅವರಿಗೆ ಬೇಕರಿ ವಹಿಸಿರುವುದಾಗಿ ಹೇಳಿದ್ದ ಎಂದರೆ ಆರೋಪಿತನಿಗೆ ವಹಿಸಿದ್ದು ನಿಜ. ನಂತರ ಫೆಬ್ರವರಿ ಮೊದಲ ವಾರದಲ್ಲಿ ಆರೋಪಿತ ಮತುತ ಮಮತಾ ಇಬ್ಬರು ನಮ್ಮ ಮನೆಗೆ ಬಂದು 3 ವರ್ಷದ ಹಿಂದೆ ಲವ್ ಮ್ಯಾರೇಜ್ ಮಾಡಿಕೊಂಡಿದ್ದೇವೆ ನಮಗೆ ಮಕ್ಕಳಿಲ್ಲ ಮತ್ತು ಮನೆಯವರ ಸಪೋರ್ಟ್ ಇಲ್ಲ, ಮಮತಾ ಕೆರೆ ತೊಣ್ಣುರಿನ ಶಿಶುವಿಹಾರದಲ್ಲಿ ಟೀಚರ್ ಆಗಿ ಕೆಲಸ ಮಾಡುತ್ತಾಳೆ, ಬೇಕರಿ ಬಂಡವಾಳಕ್ಕೆ ಮಮತಾ ಲೋನ್ ಅಪ್ಲೇ ಮಾಡಿದ್ದು ಲೋನ್ ಹಣ ಬಂದ ಕೂಡಲೇ ಸುಪ್ರೀತ್ ಗೆ 5,60,000/- ನೀಡಿ ಬೇಕರಿ ಮುಂದುವರೆಸುವುದಾಗಿ ಹೇಳಿದ್ದರು ಎಂದರೆ ಸರಿಯಲ್ಲ. ನಂತರ ದಿಃ10.02.2023 ರಂದು ಆರೋಪಿತ ಮೋಹನ್ ಕುಮಾರ್ ಮತ್ತು ಮಮತಾ ಇಬ್ಬರು ಗಂಡ ಹೆಂಡತಿ ರೀತಿ ಪೂಜೆ ಮಾಡಿ ಬೇಕರಿ ವ್ಯವಹಾರ ಮುಂದುವರೆಸಿದ್ದರು ಎಂದರೆ ಸರಿಯಲ್ಲ. ಅವರು ಬೇಕರಿ ಪಕ್ಕದಲ್ಲಿರುವ ಪಾರ್ವತಿ ಎನ್ನುವವರ ಮನೆಯನ್ನು ಬಾಡಿಗೆಗೆ ಪಡೆದು ಅಲ್ಲಿಯೇ

ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ನಂತರ ಏಪ್ರಿಲ್ 2023 ರಲ್ಲಿ ಆರೋಪಿತನ ಹೆಸರಿನಲ್ಲಿ ಬಾಡಿಗೆ ಕರಾರು ಪತ್ರ ಮಾಡಿಕೊಂಡಿದ್ದರು ಎಂದರೆ ಬಾಡಿಗೆ ಕರಾರು ಪತ್ರ ಮಾಡಿಕೊಂಡಿದ್ದು ನಿಜ.

4. ದಿಃ24.05.2023 ರಂದು ನಾನು ಮನೆಯಲ್ಲಿದ್ದಾಗ ಮಧ್ಯಾಹ್ನ 1.30 ಗಂಟೆಯಿಂದ ಆರೋಪಿ ಮತ್ತು ಮಮತಾ ಹಣದ ವಿಚಾರವಾಗಿ ಜಗಳ ಮಾಡುತ್ತಿದುದ್ದನ್ನು ಕೇಳಿ ನಾನು ಹೊರಗೆ ಬಂದು ಇಬ್ಬರಿಗೂ ಸಮಾಧಾನ ಮಾಡಿದ್ದೆ ಎಂದರೆ ಸರಿಯಲ್ಲ. ಆ ನಂತರವೂ ಸಹ ಮಮತಾ ಆರೋಪಿತನಿಗೆ ನೀನು ಈ ದಿನ ಹಣ ಕೊಡದೇ ಇದ್ದರೇ ನಾನು ಇಲ್ಲಿಂದ ಹೊಗುವುದಿಲ್ಲ ಎಂದು ಕೂಗಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತ ನಾನು ಕೊಡುವುದಿಲ್ಲ ನೀನು ಏನಾದರೂ ಮಾಡಿಕೊ ಎಂದು ಹೇಳುತ್ತಿದ್ದ ಎಂದರೆ ಸರಿಯಲ್ಲ. ನಂತರ ನಾನು ನನ್ನ ಅಳಿಯ ಕುಮಾರ್ ನನ್ನು ಮನೆಗೆ ಬರುವಂತೆ ಹೇಳಿ ಕಳುಹಿಸಿ ಮನೆಯಲ್ಲಿ ಕುಳಿತಿದ್ದೆ ಎಂದರೆ ಸರಿಯಲ್ಲ. ಅದೇ ದಿನ ಮಧ್ಯಾಹ್ನ ***3.30*** ಕ್ಕೆ ಕುಮಾರ ಮನೆಗೆ ಬಂದಾಗ ನಾನು ಹೋಗಿ ನೊಡುವಂತೆ ಹೇಳಿದ್ದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಮತ್ತು ಕುಮಾರ ಬೇಕರಿ ಬಳಿ ಹೋಗಲು ನಮ್ಮ ಮನೆ ಮೆಟ್ಟಿಲು ಇಳಿಯುತ್ತಿರುವಾಗ ಅಮ್ಮ ಎಂದು ಕಿರುಚಿಕೊಂಡ ಶಬ್ದ ಕೇಳಿತ್ತು ಮತ್ತು ಆರೋಪಿತ ಬೇಕರಿಯೊಳಗಿನಿಂದ ಆಚೆ ಬಂದು ರಸ್ತೆ ಕಡೆಗೆ ಓಡಿ ಹೋಗಿದ್ದ ಎಂದರೆ ಸರಿಯಲ್ಲ. ನಂತರ ಕುಮಾರ ಬೇಕರಿ ಒಳಗೆ ಹೋಗಿ ಹೊರಗೆ ಬಂದು ಯಾರಿಗೋ ಫೋನ್ ಮಾಡಿ ಬರುವಂತೆ ಹೇಳಿದ್ದ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ವಿಚಾರಿಸಿದಾಗ ಕುಮಾರನು ಮೋಹನ ಮಮತಾಳ ತಲೆಗೆ ರಾಡಿನಿಂದ ಹೊಡೆದು ಓಡಿಹೋಗಿದ್ದಾನೆ ಎಂದು ಹೇಳಿದ್ದ ಎಂದರೆ ಸರಿಯಲ್ಲ. ನಂತರ ಆಂಬ್ಯುಲೆನ್ಸ್ ನಲ್ಲಿ ಮಮತಾಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಆ ದಿನ ಸಂಜೆ ***6*** ಗಂಟೆಗೆ ***4-5*** ಜನ ನಮ್ಮ

ಮನೆ ಬಳಿ ಬಂದಾಗ ಅವರಲ್ಲಿದ್ದ ರಾಮೇಗೌಡ ಎನ್ನುವವರು ಮಮತಾ ತನ್ನ ಹೆಂಡತಿ ಎಂದು ಬೇಕರಿ ನಡೆಸಲು ಆರೋಪಿತನಿಗೆ ಹಣ ಕೊಟ್ಟಿದ್ದಾಳೆ ಎಂದು ಮತ್ತು ಬೇಕರಿ ಆರೋಪಿತನೊಂದಿಗೆ ಬೇಕರಿ ನಡೆಸಿಕೊಂಡಿದ್ದಾಳೆ ಎಂದು ಹೇಳಿದ್ದ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಆರೋಪಿತ ಮಮತಾಳಿಗೆ ಹೊಡೆದ ವಿಷಯ ತಿಳಿಸಿದ್ದೆ ಎಂದರೆ ಸರಿಯಲ್ಲ. ಆರೋಪಿತ ಮಮತಾಳೊಂದಿಗೆ ಅನೈತಿಕ ಸಂಬಂದ ಇಟ್ಟುಕೊಂಡು ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು ಆ ಸಾಲ ತೀರಿಸುವುದನ್ನು ತಪ್ಪಿಸುವ ಸಲುವಾಗಿ ಮತ್ತು ಸಂಬಂದ ಕಡಿದುಕೊಳ್ಳುವ ಸಲುವಾಗಿ ಮಮತಾಳಿಗೆ ಕಬ್ಬಿಣದ ರಾಡಿನಿಂದ ಹೊಡೆದು ಕೊಲೆ ಮಾಡಿದ್ದ ಎಂದರೆ ಗೊತ್ತಿಲ್ಲ. ಈ ಬಗ್ಗೆ ಫೆಬ್ರವರಿ -------- ಗುರುತಿಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*8* ಎಂದು ಗುರುತಿಸಿದೆ. ಈಗ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ- ಇಲ್ಲ**

**ಮರು ವಿಚಾರಣೆಃ- ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**